೨೦೦೧ನೇ ವರ್ಷ ಕಾವೇರಿ ಹಾಗೂ ಅಮೇರಿಕಾಗೆ ವಿಶೇಷವಾಗಿತ್ತು. ಈ ವರ್ಷದಲ್ಲಿ ಕಾವೇರಿ ಸಂಘದ ಕಾರ್ಯನಿರ್ವಾಹಕ ಸಮಿತಿಗೆ ಹಲವು ಹೊಸ ಯುವ ನಾಯಕರು ಸೇರ್ಪಡೆಗೊಂಡು, ಕಾವೇರಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದಂತಹ ನಾಯಕರ ಗುಂಪಿನ ಸೃಷ್ಟಿಗೆ ಕಾರಣವಾಯಿತು. ತಂತ್ರಜ್ಞಾನದ ಉಬ್ಬರದಿಂದಾಗಿ ಸಂಘಕ್ಕೆ ಹೆಚ್ಚಿನ ಸಂಖ್ಯೆಯ ಸದಸ್ಯರ ಸೇರ್ಪಡೆಯಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯ ಸದಸ್ಯರು ಕಾರ್ಯನಿರ್ವಾಹಕ ಸಮಿತಿಗೆ ಸೇರ್ಪಡೆಯಾದರು.

ಉಗಾದಿ ಹಬ್ಬದದಂದು ಶ್ರೀಮತಿ ಶಶಿಕಲಾ ಚಂದ್ರಶೇಖರ್ ಅವರ ನಿರ್ದೇಶನದಲ್ಲಿ ೫೦ ಮಕ್ಕಳು ಒಳಗೊಂಡಂತೆ 'ಹಚ್ಚೇವು ಕನ್ನಡದ ದೀಪ' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾರತದ ನೂಪುರ ಭರತನಾಟ್ಯ ಶಾಲೆಯ ಖ್ಯಾತ ಡಾ. ಲಲಿತಾ ಶ್ರೀನಿವಾಸನ್ ಅವರು ಆಗಮಿಸಿ ಅತ್ಯದ್ಭುತವಾದ ಭರತನಾಟ್ಯ ಪ್ರದರ್ಶನವನ್ನು ನೀಡಿದರು. ಇದೇ ಮೊದಲ ಬಾರಿಗೆ ಈ ಕಾರ್ಯಕ್ರಮದಲ್ಲಿ ಬಹಳ ಕಡಿಮೆ ಖರ್ಚಿನಲ್ಲಿ ಸ್ಥಳೀಯ ಕನ್ನಡವರ ಹೋಟೆಲ್ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ರಾಕ್‌ವಿಲ್ ಹೈಸ್ಕೂಲ್‌ನಲ್ಲಿ ಆಯೋಜಿಸಲಾಗಿದ್ದ ಈ ಕಾಯಕ್ರಮದಲ್ಲಿ ೩೦೦ಕ್ಕೂ ಹೆಚ್ಚಿನ ಸದಸ್ಯರು ಹಾಜರಿದ್ದರು.

ಉಗಾದಿ ಸಮಾರಂಭದ ನಂತರ, ಭಾರತದ ರಾಯಭಾರಿ ಕಚೇರಿಯಲ್ಲಿ ಭಾರತದ ಮಾಜಿ ಪ್ರಧಾನಿ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೆಗೌಡ ಅವರನ್ನು ಭೇಟಿ ಮಾಡುವ ಹಾಗೂ ಅವರೊಂದಿಗೆ ಕಾವೇರಿ ಸದಸ್ಯರ ಮಿಲನ ಹಾಗು ಔತಣ ಕೂಟ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ೧೦೦ಕ್ಕೂ ಹೆಚ್ಚಿನ ಸಂಖ್ಯೆಯ ಕಾವೇರಿ ಸದಸ್ಯರು ಭಾಗವಹಿಸಿದರು.

ಭಾರತದ ಅಂದಿನ ಗೃಹ ಸಚಿವರಾದ ಶ್ರೀ ಎಲ್.ಕೆ. ಅಡ್ವಾಣಿ ಹಾಗೂ ಮಾಜಿ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಒಳಗೊಂಡಂತೆ ಹಲವಾರು ಪ್ರತಿಷ್ಠಿತ ನಾಯಕರು ಭೇಟಿ ನೀಡಿದ್ದಾಗ ಕಾವೇರಿ ಸಂಘದ ಸದಸ್ಯರು ಭಾಗವಹಿಸಿ ಅವರನ್ನು ಭೇಟಿ ಮಾಡುವ ಸೌಭಾಗ್ಯವೂ ಲಭಿಸಿತ್ತು.

ಈ ವರ್ಷ ಕನ್ನಡ ಚಲನಚಿತ್ರ ವೀಕ್ಷಕರ ಸಂಖ್ಯೆಯೂ ಹೆಚ್ಚಿದ್ದು, ಕನ್ನಡ ಜನಪ್ರಿಯ 'ಸ್ಪರ್ಶ' ಚಲನಚಿತ್ರದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಪ್ರದರ್ಶನದಿಂದ ಸಂಗ್ರಹಿಸಲಾದ ದೇಣಿಗೆ ಮೊತ್ತವನ್ನು ಭಾರತದ ಉತ್ತರ ಭಾಗಗಳಲ್ಲಿ ಸಂಭವಿಸಿದಂತಹ ಪ್ರವಾಹ ಸಂತ್ರಸ್ತರಿಗಾಗಿ ಪ್ರಧಾನ ಮಂತ್ರಿ ಪರಿಹಾರ ನಿಧಿಗೆ ನೀಡಲಾಯಿತು.

ಬೇಸಿಗೆಯಲ್ಲಿ ಭಾರತದಿಂದ ಅವರವರ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿರುವಂತಹ ಹಲವು ಮಹನೀಯರಿಗೆ ಆತಿಥ್ಯವನ್ನು ನೀಡುವ ಅವಕಾಶ ನಮಗೆ ಲಭಿಸಿತು. ಖ್ಯಾತ ಸಾಹಿತಿ ಪ್ರೊ. ಜಿ.ಎಸ್. ಶಿವರುದ್ರಪ್ಪ ಅವರು ಭೇಟಿ ನೀಡಿ ಮಾತನಾಡಿದರು. ಮಾಂಟ್ಗೊಮೆರಿ ಕೌಂಟಿ ಬಿಲ್ಡಿಂಗ್‌ನಲ್ಲಿ ಉದಯ್ ಜಾದೂಗರ್ ಅವರ ಮಾತನಾಡುವ ಗೊಂಬೆ ಹಾಗೂ ಅದ್ಭುತ ಮಾಯಾಜಾಲದ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮ 'ಹೌಸ್ ಫುಲ್' ಆಗಿದ್ದು, ಕಾವೇರಿಯ ಬೆಳವಣಿಗೆಗೆ ಸಾಕ್ಷಿಯಾಗಿತ್ತು.

ಗಣೇಶ ಹಬ್ಬದ ಆಚರಣೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುವಾಗ ಜನಪ್ರಿಯ ತತ್ವಜ್ಞಾನಿ ಶ್ರೀ ಬನ್ನಂಜೆ ಗೋವಿಂದಾಚಾರ್ಯ ಅವರನ್ನು ಆಹ್ವಾನಿಸಲು ಯೋಜಿಸಲಾಗಿತ್ತು. ಆದರೆ ೯೧೧ ದುರ್ಘಟನೆ ಸಂಭವಿಸಿದ್ದರಿಂದ ಕಾರ್ಯಕ್ರಮವನ್ನು ರದ್ದುಗೊಳಿಸಬೇಕಾಯಿತು.

ಈ ವರ್ಷ ಏರ್ಪಡಿಸಲಾಗಿದ್ದಂತಹ ಮತ್ತೊಂದು ವಿಶೇಷ ಕಾರ್ಯಕ್ರಮವೆಂದರೆ 'ಯಕ್ಷಗಾನ ಪ್ರದರ್ಶನ'. ದೀಪಾವಳಿಯಂದು ಏರ್ಪಡಿಸಲಾಗಿದ್ದ ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕಾವೇರಿ ಸದಸ್ಯರೇ ನಿರ್ವಹಿಸಿದ್ದರು. ಈ ಕಾರ್ಯಕ್ರಮವನ್ನು ಇದೇ ಮೊದಲ ಬಾರಿಗೆ ದೀಪಾವಳಿಯಂದು ಗೇತರ್ಸ್ಬರ್ಗ್ ವಾಟ್ಕಿನ್ಸ್ ಮಿಲ್ ಹೈಸ್ಕೂಲ್‌ನಲ್ಲಿ ಏರ್ಪಡಿಸಲಾಗಿತ್ತು.

ಈ ವರ್ಷದ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಕಾವೇರಿ ಬ್ಯಾನರ್ ಅಡಿ 'ಅಕ್ಕ' ಸಮಾವೇಶವನ್ನು ಆಯೋಜಿಸುವ ಸಂಭವದ ಕುರಿತು ಚರ್ಚಿಸಲಾಯಿತು. ಈ ಚರ್ಚೆಯೇ ಮುಂದೆ ೨೦೦೯ರಲ್ಲಿ ನಡೆದ ಸಮಾವೇಶಕ್ಕೆ ನಾಂದಿಯಾಯಿತು.